# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 644 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 22.07.2019 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2013-14 ರಿಂದ ಇಲ್ಲಿಯವರೆಗೂ ರಾಯಚೂರು ಜಿಲ್ಲೆಗೆ ಹಿಂದುಳಿದ ವರ್ಗಗಳಲ್ಲಿ ಕಲ್ಯಾಣ ಇಲಾಖೆ ಯಿಂದ ಮಂಜೂರಾಗಿರುವ ಯೋಜನೆಗಳು ಯಾವುವು; ಈ ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು? | **<u>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ</u>**<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ರಾಯಚೂರು ಜಿಲ್ಲೆಗೆ 2013-14ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಮಂಜೂರಾಗಿರುವ ಯೋಜನೆಗಳು ಹಾಗೂ ಬಿಡುಗಡೆಯಾಗಿರುವ ಅನುದಾನದ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ.<br><br>**<u>ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮ ನಿಯಮಿತ</u>**<br><br>2013-14 ರಿಂದ ಇಲಿಯವರೆಗೆ ರಾಯಚೂರು ಜಿಲ್ಲೆಗೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಮಂಜೂರಾದ ಯೋಜನೆಗಳು ಈ ಕೆಳಕಂಡಂತಿವೆ.<br>1. ಸ್ವಯಂ ಉದ್ಯೋಗ ಸಾಲ ಯೋಜನೆಗಳು.<br>2. ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ.<br>3. ಕಿರು ಸಾಲ ಯೋಜನೆ.<br>4. ಅರಿವು-ಶೈಕ್ಷಣಿಕ ಸಾಲ ಯೋಜನೆ.<br>5. ಗಂಗಾ ಕಲ್ಯಾಣ ನೀರಾವರಿ ಯೋಜನೆ.<br><br>ಮೇಲ್ಕಂಡ ಯೋಜನೆಗಳಿಗೆ 2013-14ರಿಂದ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ರೂ.4145.20 ಲಕ್ಷಗಳು.<br><br>**<u>ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ</u>**<br>ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮವನ್ನು ದಿನಾಂಕ:31/10/2017ರಂದು ನೊಂದಾಯಿಸಿ ಸ್ಥಾಪಿಸಲಾಗಿದೆ. 2018-19ರಿಂದ ಇಲ್ಲಿಯವರೆಗೆ ರಾಯಚೂರು ಜಿಲ್ಲೆಗೆ ನಿಗಮದಿಂದ ಮಂಜೂರಾದ ಯೋಜನೆಗಳು ಈ ಕೆಳಕಂಡಂತಿವೆ.<br>1. ಸ್ವಯಂ ಉದ್ಯೋಗ ಸಾಲ ಯೋಜನೆಗಳು.<br>2. ಅರಿವು-ಶೈಕ್ಷಣಿಕ ಸಾಲ ಯೋಜನೆ.<br>3. ಗಂಗಾ ಕಲ್ಯಾಣ ನೀರಾವರಿ ಯೋಜನೆ.<br><br>ಮೇಲ್ಕಂಡ ಯೋಜನೆಗಳಿಗೆ 2018-19ರಿಂದ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ರೂ.21.61 ಲಕ್ಷಗಳು. |

ಪು.ತಿ.ನೋ...

**ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ**

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮವನ್ನು ದಿನಾಂಕ:10/11/2017ರಂದು ನೊಂದಾಯಿಸಿ ಸ್ಥಾಪಿಸಲಾಗಿದೆ. 2018-19ರಿಂದ ಇಲ್ಲಿಯವರೆಗೆ ರಾಯಚೂರು ಜಿಲ್ಲೆಗೆ ನಿಗಮದಿಂದ ಮಂಜೂರಾದ ಯೋಜನೆಗಳು ಈ ಕೆಳಕಂಡಂತಿವೆ.

1. ಸ್ವಯಂ ಉದ್ಯೋಗ ಸಾಲ ಯೋಜನೆಗಳು.
2. ಅರಿವು-ಶೈಕ್ಷಣಿಕ ಸಾಲ ಯೋಜನೆ.
3. ಗಂಗಾ ಕಲ್ಯಾಣ ನೀರಾವರಿ ಯೋಜನೆ.

ಮೇಲ್ಕಂಡ ಯೋಜನೆಗಳಿಗೆ 2018-19ರಿಂದ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ರೂ.10.92 ಲಕ್ಷಗಳು.

**ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ**

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ರಾಯಚೂರು ಜಿಲ್ಲೆಗೆ 2013-14ನೇ ಸಾಲಿನಿಂದ ಕೆಳಕಂಡ ಯೋಜನೆಗಳು ಅನುಷ್ಠಾನಗೊಳಿಸಲಾಗಿರುತ್ತದೆ. ಯೋಜನೆಗಳ ವಿವರ ಕೆಳಕಂಡಂತಿದೆ.

1. ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು.
2. ಸ್ವಯಂ ಉದ್ಯೋಗ ನೇರಸಾಲ ಯೋಜನೆ.
3. ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ.
4. ಅರಿವು-ಶೈಕ್ಷಣಿಕ ಸಾಲ ಯೋಜನೆ.
5. ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆ.
6. ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆ.
7. ಕಮ್ಮಾರಿಕೆ, ಅಕ್ಕಸಾಲಿ ಮತ್ತು ಬಡಗಿ ಉದ್ಯಮಿಗಳಿಗೆ ತರಬೇತಿ ಮತ್ತು ಸಾಲ ಯೋಜನೆ.

ರಾಯಚೂರು ಜಿಲ್ಲೆಗೆ ಯೋಜನೆಗಳ ಅನುಷ್ಠಾನಕ್ಕಾಗಿ ಬಿಡುಗಡೆಯಾದ ವರ್ಷವಾರು ಅನುದಾನದ ವಿವರ ಕೆಳಕಂಡಂತಿದೆ.

| ಕ್ರ. ಸಂ | ವರ್ಷವಾರು | ನಿಗಧಿಪಡಿಸಿದ ಗುರಿ | | ಸಾಧಿಸಿರುವ ಪ್ರಗತಿ ವಿವರ | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | 2014-15 | 30 | 13.99 | 21 | 9.60 |
| 2 | 2015-16 | 86 | 46.81 | 121 | 43.24 |
| 3 | 2016-17 | 107 | 55.00 | 125 | 49.42 |
| 4 | 2017-18 | 97 | 63.65 | 131 | 55.65 |
| 5 | 2018-19 | 60 | 48.85 | 78 | 45.20 |
| | ಒಟ್ಟು | 380 | 228.30 | 476 | 203.11 |

ಸಂಖ್ಯೆ:ಹಿಂವಕ 158 ಬಿಎಂಎಸ್ 2019

(ಬಿ.ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ